

ಇನ್ನೊಬ್ಬ 'ಬಂಗಾರದ ಮನುಷ್ಯ' ಎಂದು ಬಂದಾನು?

ಅಯ್ಯರ್, ಬಾಲಕೃಷ್ಣ ಹಾಗೂ ನರಸಿಂಹರಾಜು ಅವರನ್ನೊಳಗೊಂಡ ಮಿತ್ರಮಂಡಳಿ, 'ಕನ್ನಡ ಚಲನಚಿತ್ರ ಕಲಾವಿದರ ಸಂಘ' ಹೆಸರಿನಲ್ಲಿ ನಿರ್ಮಿಸಿದ ಈ ಸಿನಿಮಾ (1960) ಕನ್ನಡ ಸಿನಿಮಾ ಕಲಾವಿದರ ಘನತೆಯನ್ನು ಎತ್ತಿಹಿಡಿಯುವ ಪ್ರಯತ್ನವಾಗಿತ್ತು. ತಮಿಳುನಾಡಿನಲ್ಲಿ ನೆಲೆಗೊಂಡಿದ್ದ ಕನ್ನಡ ಚಿತ್ರರಂಗ ಕರ್ನಾಟಕಕ್ಕೆ ಮರಳುವ ನಿಟ್ಟಿನಲ್ಲಿ ಕಂಠೀರವ ಚಿತ್ರ ಪ್ರೇರಣೆಯ ರೂಪದಲ್ಲಿ ಕೆಲಸ ಮಾಡಿತು. ಹಿಂದಿ ಚಿತ್ರಗಳು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಬೇಡಿಕೆ ಹೊಂದಿದ್ದ ದಿನಗಳಲ್ಲಿ, 'ರಣಧೀರ ಕಂಠೀರವ' ಚಿತ್ರವನ್ನು ನೋಡಿ ಎಂದು ಚಿತ್ರಮಂದಿರದ ಹೊರಗೆ ವಾಟಾಳ್ ನಾಗರಾಜ್ ಅವರು ಪ್ರಚಾರ ಮಾಡಿದ ಘಟನೆಯನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

ಇನ್ನು ಪುಟ್ಟಣ್ಣ ಕಣಗಾಲ್, ಹುಣಸೂರು ಕೃಷ್ಣಮೂರ್ತಿ, ಸಿದ್ದಲಿಂಗಯ್ಯನವರಂಥ ನಿರ್ದೇಶಕರು ತಮ್ಮ ಸಿನಿಮಾಗಳಲ್ಲಿ ಕಟ್ಟಿಕೊಟ್ಟ ಕನ್ನಡತನ ಅಪರೂಪದ್ದು. ಪುಟ್ಟಣ್ಣ ಹಾಗೂ ಸಿದ್ದಲಿಂಗಯ್ಯನವರಂತೂ ಸಾಹಿತ್ಯ ಕೃತಿಗಳನ್ನು ದೃಶ್ಯ ಮಾಧ್ಯಮಕ್ಕೆ ಅಳವಡಿಸುವ ಮೂಲಕ ಸಿನಿಮಾ–ಸಾಹಿತ್ಯದ ನಂಟು ಗಾಢವಾಗಲಿಕ್ಕೆ ಕಾರಣರಾದರು. ಪುಟ್ಟಣ್ಣನವರ 'ಶರಪಂಜರ', 'ಬೆಳ್ಳಿಮೋಡ', 'ಗೆಜ್ಜೆಪೂಜೆ', 'ಕಥಾಸಂಗಮ', 'ಕಾಲೇಜುರಂಗ' – ಇವೆಲ್ಲ ಸಿನಿಮಾಗಳ ಹಿಂದೆ ಸಾಹಿತ್ಯಕೃತಿಗಳ ದ್ರವ್ಯವಿದೆ. ಇದರ ಜೊತೆಗೆ ಕನ್ನಡ ಕವಿಗಳ ಕವಿತೆಗಳನ್ನು ತಮ್ಮ ಚಿತ್ರಗಳಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದು ಪುಟ್ಟಣ್ಣನವರ ಮತ್ತೊಂದು ಅಗ್ಗಳಿಕೆ. ಬೇಂದ್ರೆಯವರ 'ಮೂಡಲ ಮನೆಯಾ' ಕವಿತೆ ಪುಟ್ಟಣ್ಣನವರ 'ಶರಪಂಜರ' ಚಿತ್ರದಲ್ಲಿ ಕವಲುಕಾವ್ಯವಾಗಿ ರೂಪುಗೊಂಡಿರುವ ಪರಿ ಅನನ್ಯವಾದುದು.

ಸಿದ್ದಲಿಂಗಯ್ಯನವರ 'ಬಂಗಾರದ ಮನುಷ್ಯ' ಹಾಗೂ 'ಬೂತಯ್ಯನ ಮಗ ಅಯ್ಯು' ಕನ್ನಡದ ಅತ್ಯುತ್ತಮ ಚಿತ್ರಗಳ ಸಾಲಿಗೆ ಸೇರಿರುವುದಕ್ಕೆ ಅವುಗಳಲ್ಲಿನ ಸಾಹಿತ್ಯಿಕ ಗುಣವೂ ಕಾರಣವಾಗಿದೆ.

ಪ್ರಯೋಗಶೀಲ ಚಿತ್ರಗಳ ನಿರ್ದೇಶಕರಂತೂ ಕನ್ನಡ ಸಂಸ್ಕೃತಿಯ ಹಲವು ಆಯಾಮಗಳನ್ನು ತಮ್ಮ ಸಿನಿಮಾಗಳಲ್ಲಿ  ಹಿಡಿದಿಡಲು ನಡೆಸಿದ ಪ್ರಯೋಗ ಕನ್ನಡ ಚಿತ್ರಚರಿತ್ರೆಯ ವರ್ಣರಂಜಿತ ಅಧ್ಯಾಯಗಳಾಗಿವೆ. ಶಿವರಾಮ ಕಾರಂತರ 'ಚೋಮನದುಡಿ'ಯನ್ನು ಸಿನಿಮಾ ಮಾಡಿದ ಬಿ.ವಿ. ಕಾರಂತರು, ಚೋಮನ ಮೂಲಕ ಭಾರತೀಯ ಚಿತ್ರರಂಗಕ್ಕೆ ದಲಿತಸ್ಪರ್ಶದ ಕಸಿ ಮಾಡಿದ್ದು ಒಂದು ಮಹತ್ವದ ಸಂಗತಿ. ಯು.ಆರ್. ಅನಂತಮೂರ್ತಿ ಅವರ ಕಾದಂಬರಿಯನ್ನು ಆಧರಿಸಿದ 'ಸಂಸ್ಕಾರ' ಸಿನಿಮಾ ಪಟ್ಟಾಭಿರಾಮ ಸೋಮಯಾಜಿ, ಗಿರೀಶ ಕಾರ್ನಾಡ, ರಾಜೀವ ತಾರಾನಾಥ, ಲಂಕೇಶ್, ಎಸ್.ಜಿ. ವಾಸುದೇವ್‌ರಂಥ ಭಿನ್ನ ಕ್ಷೇತ್ರಗಳ ಪ್ರತಿಭಾವಂತರನ್ನು ಒಟ್ಟುಮಾಡಿದ್ದಲ್ಲದೆ, ಕನ್ನಡದಲ್ಲಿ ಪ್ರಯೋಗಶೀಲ ಚಿತ್ರಗಳ ಉತ್ಕರ್ಷಕ್ಕೆ ಮುನ್ನುಡಿ ಬರೆಯಿತು.

ವರನಟ ರಾಜಕುಮಾರ್ ಅವರಂತೂ ಸಿನಿಮಾ ಚೌಕಟ್ಟನ್ನು ದಾಟಿ ಕನ್ನಡ ಪ್ರಜ್ಞೆಯ ರೂಪದಲ್ಲಿ ಜನಪ್ರಿಯಗೊಂಡಿರುವ ಕಲಾವಿದ. ಕನ್ನಡ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಾರಿತ್ರಿಕ, ಪೌರಾಣಿಕ, ಜಾನಪದ ಹಾಗೂ ಸಾಮಾಜಿಕ ಪಾತ್ರಗಳಲ್ಲಿ ನಟಿಸಿದ ಹಿರಿಮೆ ರಾಜ್ ಅವರದು. ಅಖಂಡ ಕರ್ನಾಟಕದ ಸಾಕ್ಷಿಪ್ರಜ್ಞೆ ಎನ್ನಿಸಿಕೊಂಡ ಅಪೂರ್ವ ಸಾಧನೆ ಅವರದು.

ಇದೆಲ್ಲವೂ ಪರಂಪರೆಯ ಮಾತಾಯಿತು. ಈ ಪರಂಪರೆಯನ್ನು ಮುಂದುವರಿಸಬೇಕಾದ ವಾರಸುದಾರರ ಕನ್ನಡ ಪ್ರಜ್ಞೆ ಹೇಗಿದೆ ಎನ್ನುವ ಕುತೂಹಲ ವಿಭಿನ್ನ ನೋಟಗಳನ್ನು ಒದಗಿಸುತ್ತದೆ. 'ಒಲವೇ ಮಂದಾರ' ಖ್ಯಾತಿಯ ನಿರ್ದೇಶಕ ಜಯತೀರ್ಥರ ಎಲ್ಲ ಚಿತ್ರಗಳಲ್ಲೂ ಕನ್ನಡದ ಪರಿಮಳವನ್ನು ಕಾಣಬಹುದು. ಸುಖದ ಬೆನ್ನು ಹತ್ತಿಹೋಗುವ ತಲೆಮಾರಿನ ಕಥೆಯನ್ನು ನಿರೂಪಿಸುವ 'ಟೋನಿ'ಯಂಥ ಚಿತ್ರದಲ್ಲೂ ಕನ್ನಡದ ತ್ರಿಪದಿಗಳನ್ನು ಬಳಸಿಕೊಳ್ಳುವ ಮೂಲಕ ಸಿನಿಮಾಕ್ಕೆ ಈ ನೆಲದ ಸ್ಪರ್ಶವನ್ನು ಕೊಡುವ ಪ್ರಯತ್ನವನ್ನು ಅವರು ಮಾಡುತ್ತಾರೆ. 'ಒಲವೇ ಮಂದಾರ'ದಂಥ ಭಾರತ ದರ್ಶನದ ಸಿನಿಮಾದಲ್ಲಿ ಕನ್ನಡದ ಕವಿ ಜಿ.ಪಿ. ರಾಜರತ್ನಂ ಸೃಷ್ಟಿಸಿದ ರತ್ನ–ನಂಜಿಯ ತವಕ ತಲ್ಲಣಗಳನ್ನು ಒಳಗೊಳ್ಳುವ ಮೂಲಕ ಕನ್ನಡದ ಆಯಾಮವೊಂದನ್ನು ಸೃಷ್ಟಿಸುತ್ತಾರೆ. ಚಿತ್ರದ ಶೀರ್ಷಿಕೆಯೊಂದಿಗೆ ಇಂಗ್ಲಿಷ್ ಅನ್ನು ಕಸಿ ಮಾಡಿಕೊಂಡಿರುವ 'ಬ್ಯೂಟಿಫುಲ್ ಮನಸುಗಳು' ಚಿತ್ರದಲ್ಲಿ ಶಿಶುನಾಳ ಷರೀಫರು ಸುಳಿದುಹೋಗುತ್ತಾರೆ. ಪ್ರಜ್ಞಾಪೂರ್ವಕವಾಗಿಯೂ